# ರಾಮಕೃಷ್ಣ ಮಹಾಸಂಘ – ಒಂದು ಕಿರು ಪರಿಚಯ

ಬ್ರಹ್ಮಚಾರಿ ಸುವಿಮಲಚೈತನ್ಯ

(ರಾಮಕೃಷ್ಣ ಮಹಾಸಂಘದ ವೈಶಿಷ್ಟ್ಯಗಳನ್ನು ಸಂಗ್ರಹರೂಪದಲ್ಲಿ ಬರೆದಿರುವ ಲೇಖಕರು ಮೈಸೂರಿನ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.)

ಮೇ ೧, ೧೮೯೭ ರಂದು ರಾಮಕೃಷ್ಣ ಮಿಷನ್ ಅಧಿಕೃತವಾಗಿ ಪ್ರಾರಂಭವಾಯಿತು. ಈ ವರ್ಷದ ಮೇ ೧ನೆಯ ತಾರೀಖು ಅದು ತನ್ನ ೧೧೭ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿದೆ. ಸನಾತನ ಧರ್ಮದ ಇತಿಹಾಸದಲ್ಲಿ ಸಂನ್ಯಾಸೀ ಪರಂಪರೆಯನ್ನು ಋಗ್ವೇದ ಕಾಲದಿಂದಲೂ ಕಾಣಬಹುದು. **'ಯತಿ'**, **'ಮುನಿ'** ಎಂಬ ಪದಗಳ ಬಳಕೆಯೇ ಇದಕ್ಕೆ ಸಾಕ್ಷಿ. ಕ್ರಿ.ಪೂ. ೬ನೇ ಶತಮಾನದಲ್ಲಿ ಬುದ್ಧನಿಂದ ಸಂನ್ಯಾಸವು ಎಲ್ಲ ಕಡೆ ಹರಡಿತು. ಆಶ್ರಮಗಳು ಕೂಡ ಯಥೇಚ್ಛವಾಗಿ ಕಂಡುಬಂದವು. ಸಂನ್ಯಾಸಿಗಳು ಗುಂಪುಗಳಲ್ಲಿ ನೆಲಸುವ ಸಂಸ್ಥೆಯನ್ನು ಬುದ್ಧನು 'ಸಂಘ' ಎಂದು ಹೆಸರಿಸಿದನು. ಇಲ್ಲಿ ಜಾತಿ–ಮತ–ಧರ್ಮಗಳ ಭೇದವು ಅಳಿದು, ಸರ್ವರೂ ಸಂನ್ಯಾಸವನ್ನು ಸ್ವೀಕರಿಸಲು ಮುಕ್ತ ಅವಕಾಶವನ್ನು ನೀಡಲಾಯಿತು. ತದನಂತರ ಕ್ರಿ.ಶ. ೮ನೇ ಶತಮಾನದಲ್ಲಿ ಶ್ರೀಶಂಕರಾಚಾರ್ಯರು ಭಾರತದ ಉದ್ದಗಲಕ್ಕೂ ಸಂಚರಿಸಿ ಸನಾತನ ಧರ್ಮವನ್ನು ಪುನರುತ್ಥಾನಗೊಳಿಸಿದರು. ಅಲ್ಲದೆ ಈ ಉದ್ದೇಶಕ್ಕಾಗಿ ಭಾರತದ ನಾಲ್ಕು ಮೂಲೆಗಳಲ್ಲಿಯೂ ಮಠಗಳನ್ನು ಸ್ಥಾಪಿಸಿದರು. ಈ ರೀತಿಯಲ್ಲಿ ಹಿಂದೂ ಸಂನ್ಯಾಸಿ ಪದ್ಧತಿಗೆ ಸ್ಪಷ್ಟರೂಪವನ್ನು ನೀಡಿದರು.

೧೯ನೇ ಶತಮಾನದ ಹೊತ್ತಿಗೆ ಭಾರತವು ಪರಕೀಯರ ದಾಸ್ಯಕ್ಕೆ ಒಳಪಟ್ಟಿತ್ತು. ಹಿಂದೂಧರ್ಮ, ಸಂಸ್ಕೃತಿಗಳು ವಿನಾಶದ ಅಂಚಿನಲ್ಲಿದ್ದವು. ಧರ್ಮವು ಸ್ವಾರ್ಥಿಗಳ ಕೈಯಲ್ಲಿ ಸಿಲುಕಿ ಮೂಢನಂಬಿಕೆಗಳ ಆಗರವಾಗಿತ್ತು. ಸನಾತನಧರ್ಮವು ತನ್ನ ನೈಜ ಸ್ವರೂಪವನ್ನು ಜನತೆಗೆ ಸಮರ್ಪಕವಾಗಿ ತಿಳಿಸಿಕೊಡಲು ಅಶಕ್ತವಾಗಿತ್ತು. ಇಂತಹ ವಿಷಮಗಳಿಗೆಯಲ್ಲಿ ರಾಮಕೃಷ್ಣ ಮಹಾಸಂಘವು ಭಗವಾನ್ ಶ್ರೀರಾಮಕೃಷ್ಣ ಪರಮಹಂಸರಿಂದಲೇ ಪ್ರವರ್ತನಗೊಂಡಿತು. ಸ್ವಾಮಿ ವಿವೇಕಾನಂದರೇ ಹೇಳುವಂತೆ, "ಶ್ರೀರಾಮಕೃಷ್ಣ ಪರಮಹಂಸರು ಸನಾತನ ಸಂಸ್ಕೃತಿಯನ್ನು ಪುನರುತ್ಥಾನ ಮಾಡಲು ಬಂದಿರುವರು. ೨೫೦೦ ವರ್ಷಗಳ ಸನಾತನ ಸಂಸ್ಕೃತಿಯ ಮೂರ್ತಸ್ವರೂಪರು ಅವರು. ಅಲ್ಲದೆ ಇವರು ಯಾವುದೇ ಹೊಸ ಜಾತಿ, ಮತ, ಪಂಥವನ್ನು ಪ್ರಾರಂಭಿಸಲು ಬಂದಿಲ್ಲ. ಬದಲಾಗಿ ಸನಾತನ ಧರ್ಮದ ಪುನರುತ್ಥಾನಕ್ಕಾಗಿ ಬಂದಿರುವರು. ಇವರಲ್ಲಿ ಎಲ್ಲವೂ ಸಕರಾತ್ಮಕವಾಗಿದೆ."

ರಾಮಕೃಷ್ಣ ಮಹಾಸಂಘವು ಸನಾತನ ಧರ್ಮವನ್ನಲ್ಲದೆ, ಬೌದ್ಧ, ಕ್ರೈಸ್ತಧರ್ಮಗಳಲ್ಲಿರುವ ಕೆಲವು ಅಂಶಗಳನ್ನೂ ಮೈಗೂಡಿಸಿಕೊಂಡು ರೂಪುಗೊಂಡಿದೆ. ಮುಖ್ಯವಾಗಿ ಶ್ರೀರಾಮಕೃಷ್ಣ ಮತ್ತು ಸ್ವಾಮಿ ವಿವೇಕಾನಂದರು ಪ್ರತಿಪಾದಿಸಿದ ವೇದಾಂತ ತತ್ತ್ವದ ತಳಹದಿಯನ್ನು ಅದು ಹೊಂದಿದೆ. ಮಹಾಸಂಘವು ಧರ್ಮ ಮತ್ತು ಸಂಸ್ಕೃತಿಗಳನ್ನು ವಿಶಾಲವಾದ ಅರ್ಥದಲ್ಲಿ ಮೈಗೂಡಿಸಿಕೊಂಡಿದೆ. ಅಲ್ಲದೆ ಇವುಗಳ ಏಳಿಗೆಗೆ ಅಹರ್ನಿಶಿ ಪರಿಶ್ರಮಿಸುತ್ತಿದೆ.

ಮಹಾಸಂಘವು **'ರಾಮಕೃಷ್ಣ ಮಠ'** ಮತ್ತು **'ರಾಮಕೃಷ್ಣ ಮಿಷನ್'** ಎಂಬ ಎರಡು ವಿಭಾಗಗಳ ಮೂಲಕ ತನ್ನ ಕಾರ್ಯವನ್ನು ನಿರ್ವಹಿಸುತ್ತಿದೆ. ಮಠವು ಮುಖ್ಯವಾಗಿ ಧಾರ್ಮಿಕ, ಆಧ್ಯಾತ್ಮಿಕ, ಸಾಂಸ್ಕೃತಿಕ, ತತ್ತ್ವಪ್ರಚಾರ – ಈ ರಂಗಗಳಲ್ಲಿ ಕಾರ್ಯಗಳನ್ನು ಮಾಡುತ್ತಿದೆ. ಮಿಷನ್, ಮುಖ್ಯವಾಗಿ ಶೈಕ್ಷಣಿಕ, ಆರೋಗ್ಯ, ಮಹಿಳೆಯರ ಉದ್ಧಾರ, ಗ್ರಾಮೀಣಾಭಿವೃದ್ಧಿ, ಬುಡಕಟ್ಟು ಜನಾಂಗದ ಏಳಿಗೆ, ಪರಿಹಾರ ಸೇವಾಕಾರ್ಯಗಳು ಮುಂತಾದವುಗಳನ್ನು ನೇರವೇರಿಸುತ್ತಿದೆ. ರಾಮಕೃಷ್ಣ ಮಹಾಸಂಘದ ಧ್ಯೇಯವಾಕ್ಯ **'ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ'** ಎಂದು. ಅಂದರೆ ಪ್ರತಿಯೊಬ್ಬ ಆಧ್ಯಾತ್ಮಿಕ ಸಾಧಕನೂ ತನ್ನ ಆತ್ಮೋನ್ನತಿಯನ್ನು ತಾನು ಮಾಡಿಕೊಳ್ಳುವುದರ ಜೊತೆಗೆ, ಜಗತ್ತಿನ ಹಿತವನ್ನು ಕೈಗೊಳ್ಳಲೂ ಪ್ರಯತ್ನಿಸಬೇಕು. ಯಾವುದೇ ಜಾತಿ–ಮತ–ಪಂಥ–ಧರ್ಮಗಳ ಭೇದವಿಲ್ಲದೆ ಭಗವತ್ಸೇವೆಯಲ್ಲಿ ತನ್ನ ಜೀವನವನ್ನು ಸಮರ್ಪಿಸಿಕೊಳ್ಳಲಿಚ್ಛಿಸುವ ಯುವಕರು ರಾಮಕೃಷ್ಣ ಮಹಾಸಂಘವನ್ನು ಸೇರಬಹುದು. ಅಂಥವರು ಕನಿಷ್ಠಪಕ್ಷ ಪದವೀಧರರಾಗಿರಬೇಕು, ಆರೋಗ್ಯದಿಂದ ಕೂಡಿರಬೇಕು. ಹಾಗೆಯೇ ರಾಮಕೃಷ್ಣ ಮಹಾಸಂಘದ ಧ್ಯೇಯೋದ್ದೇಶಗಳಿಗೆ ಬದ್ಧರಾಗಿರಬೇಕು. ಇದೇ ಆದರ್ಶದ ಬೆಳಕಿನಲ್ಲಿ ಪ್ರತ್ಯೇಕವಾಗಿ ಮಹಿಳೆಯರಿಗೆ 'ಶಾರದಾಮಠ'ವೂ ಇದೆ. ರಾಮಕೃಷ್ಣ ಮಹಾಸಂಘದ ಪ್ರಧಾನ ಕೇಂದ್ರವು ಕೊಲ್ಕತಾದ ಸಮೀಪದಲ್ಲಿರುವ ಬೇಲೂರು ಎಂಬಲ್ಲಿ ಇದೆ. ಇಲ್ಲಿನ ಗಂಗಾ ನದಿಯ ತಟವು ರಮಣೀಯವೂ, ಪವಿತ್ರವೂ ಆಗಿದೆ. ಈಗ ರಾಮಕೃಷ್ಣ ಮಹಾಸಂಘದ ಕೆಲವು ವೈಶಿಷ್ಟ್ಯಗಳನ್ನು ನೋಡೋಣ:

**೧. ಸರ್ವಧರ್ಮ ಸಮನ್ವಯ:** ಭಗವಾನ್ ಶ್ರೀರಾಮಕೃಷ್ಣರು 'ಎಲ್ಲ ಧರ್ಮಗಳೂ ಭಗವಂತನೆಡೆಗೆ ಒಯ್ಯುವ ವಿವಿಧ ಮಾರ್ಗಗಳು' ಎಂದು ಉಪದೇಶವಿತ್ತಿದ್ದಾರೆ. ಆ ಉದಾರ ಭಾವನೆಯನ್ನು ಮಹಾಸಂಘವು ಆಚರಣೆಗೆ ತಂದಿದೆ; ಅದರಂತೆ ಎಲ್ಲ ಧರ್ಮಗಳಿಗೂ ಸಮಾನವಾದ ಗೌರವವನ್ನು ನೀಡುತ್ತ ಬಂದಿದೆ. ಅಲ್ಲದೆ ವಿವಿಧ ಮತ–ಪಂಥಗಳಿಗೆ, ಧರ್ಮಗಳಿಗೆ ಸೇರಿದ ಸಂತರ, ಪ್ರವಾದಿಗಳ ಪುಣ್ಯದಿನಗಳನ್ನು ಮಹಾಸಂಘದ ಕೇಂದ್ರಗಳು ಆಚರಿಸುತ್ತಿವೆ. (*ಪುಟ 33 ರಲ್ಲಿ ಮುಂದುವರೆದಿದೆ*)

# ಶ್ರೀರಾಮಾನುಜರು - ಜೀವನ ಮತ್ತು ಸಾಧನೆ

ಎಚ್. ವಿ. ಸರೋಜ



**‘ವಿವೇಕಪ್ರಭ’ ಪತ್ರಿಕೆಯಲ್ಲಿ ಈಗಾಗಲೇ ಶ್ರೀಶಂಕರ ಮತ್ತು  ಶ್ರೀಮಧ್ವರ ಜೀವನಚರಿತ್ರೆಗಳನ್ನು ಪ್ರಕಟಿಸಲಾಗಿದೆ. ಈಗ ವಿಶಿಷ್ಟಾದ್ವೈತ ಆಚಾರ್ಯರಾದ ಶ್ರೀರಾಮಾನುಜರ ಜೀವನವನ್ನು ಪ್ರಕಟಿಸಲು ಹರ್ಷಿಸುತ್ತೇವೆ. ಈ ಮೂರೂ ಚರಿತ್ರೆಗಳನ್ನು ಸರಳ ಭಾಷೆಯಲ್ಲಿ ಬರೆದುಕೊಟ್ಟಿರುವ ಬೆಂಗಳೂರು ನಿವಾಸಿಗಳೂ, ರಾಮಕೃಷ್ಣ ಆಶ್ರಮದ ಭಕ್ತರೂ ಆದ ಶ್ರೀಮತಿ ಎಚ್.ವಿ. ಸರೋಜ ಅವರಿಗೆ  ನಮ್ಮ ಧನ್ಯವಾದಗಳು.**

**ಯಸ್ಯ ಪ್ರಸಾದಕಲಯಾ ಬಧಿರಃ ಶೃಣೋತಿ ।**
**ಪಂಗುಃ ಪ್ರಧಾವತಿ ಜವೇನ ಚ ವಕ್ತಿ ಮೂಕಃ ।**
**ಅಂಧಃ ಪ್ರಪಶ್ಯತಿ ಸುತಂ ಲಭತೇ ಚ ವಂಧ್ಯಾ ।**
**ತಂ ದೇವಮೇವ ವರದಂ ಶರಣಂ ಗತೋಽಸ್ಮಿ ॥**

“ಯಾವ ಮಹಾಪುರುಷನ ಅನುಗ್ರಹದಿಂದ ಕಿವುಡನು ಕೇಳುತ್ತಾನೋ, ಕುಂಟನು ಓಡುತ್ತಾನೋ, ಮೂಗನು ಮಾತನಾಡುತ್ತಾನೋ, ಕುರುಡ ನೋಡಬಲ್ಲನೋ, ಬಂಜೆಯು ಮಗನ ತಾಯಿ ಆಗುತ್ತಾಳೋ, ಅಂತಹ ನಿನ್ನನ್ನು ನಾನು ಶರಣು ಹೊಂದಿದ್ದೇನೆ. ಆದ್ದರಿಂದ ನಮ್ಮ ಮತದ ಏಳ್ಗೆಗಾಗಿ, ಸಿದ್ಧಾಂತದ ಪ್ರಚಾರಕ್ಕಾಗಿ, ಹಾಗೆಯೇ **‘ಭಕ್ತಿರೇವ ಗರೀಯಸೀ’** – ‘ಭಕ್ತಿಯೇ ಶ್ರೇಷ್ಠವಾದುದು’ ಎಂಬ ಹಿರಿಮೆ ಸಾರಲು ನನ್ನ ಸ್ಥಾನಕ್ಕೆ ನಿನ್ನ ಭಕ್ತನಾದ ರಾಮಾನುಜನನ್ನು ದಯಮಾಡಿ ಅನುಗ್ರಹಿಸು” ಎಂದು ಭಗವಂತನನ್ನು ಕೇಳಿಕೊಳ್ಳುತ್ತಾರೆ, ಶ್ರೀವೈಷ್ಣವ ಸಂತರಾದ ಯಾಮುನಾಚಾರ್ಯರು.

ಕರ್ನಾಟಕದಲ್ಲಿ ಹರಿದಾಸರು, ಶಿವಶರಣರು ಇದ್ದಂತೆ ತಮಿಳುನಾಡಿನಲ್ಲಿ ಕೂಡ ಹರಿದಾಸರು ಮತ್ತು ಶಿವಶರಣರು ಇದ್ದರು. ಅವರನ್ನು ಅಲ್ಲಿನವರು ಕ್ರಮವಾಗಿ, ‘ಆಳ್ವಾರ್’ ಮತ್ತು ‘ನಾಯಮ್ಮಾರ್’ ಎಂದು ಕರೆಯುತ್ತಾರೆ. ಅವರಲ್ಲಿ ಆಳ್ವಾರರು ಮಾಡಿದ ಮಹದುಪಕಾರವೆಂದರೆ, ಸಂಸ್ಕೃತದಲ್ಲಿರುವ ವೇದ, ವೇದಾಂತ ಸಾರವನ್ನೆಲ್ಲಾ ಸಂಸ್ಕೃತ ತಿಳಿಯದ ಸಾಮಾನ್ಯ ತಮಿಳು ಜನಗಳಿಗೂ ಕೂಡ, ಅವರ ಭಾಷೆಯಲ್ಲಿಯೇ ಧಾರೆ ಎರೆದದ್ದು. ಇಂಥ ಸತ್ಕಾರ್ಯವನ್ನೇ ಕರ್ನಾಟಕದಲ್ಲಿ ಹರಿದಾಸರು ಮತ್ತು ಶಿವಶರಣರು ಮಾಡಿದರು. ಆಳ್ವಾರರ ಇನ್ನೊಂದು ವೈಶಿಷ್ಟ್ಯವೆಂದರೆ, **ಭಗವಂತ – ಭಾಗವತ – ಭಗವದ್ಭಕ್ತ** : ಇವು ಮೂರೂ ಅವರಿಗೆ ಸಮಾನವಾಗಿ ಶ್ರೇಷ್ಠವಾಗಿರುವುದು. ಇವರು ಭಗವಂತನನ್ನು, “ಎಲ್ಲ ಜನರೂ ಸುಖಿಗಳಾಗಿ ಬಾಳಲಿ” ಎಂದೇ ಪ್ರಾರ್ಥಿಸುತ್ತಾರೆ. ಭಗವಂತನ ಅಪಚಾರವಾದರೂ ಪರವಾಗಿಲ್ಲ, ಆದರೆ ಭಗವದ್ಭಕ್ತರ ಅಪಚಾರ ಎಂದಿಗೂ ಆಗಲೇಬಾರದು ಎನ್ನುವುದೇ ಆಳ್ವಾರರ ಮನಸ್ಸಿನ ನಿಶ್ಚಯವಾಗಿತ್ತು.

“ಧರ್ಮದ ಅವನತಿಯಾದಾಗ, ಅಧರ್ಮ ತಲೆಯೆತ್ತಿದಾಗ ನಾನು ಹುಟ್ಟಿಬರುತ್ತೇನೆ” ಎಂದು ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಸ್ಪಷ್ಟವಾಗಿ ಹೇಳುತ್ತಾನಷ್ಟೇ. ಕಾಲಕ್ರಮೇಣ ಜನರಲ್ಲಿ ಅಜ್ಞಾನ ಹೆಚ್ಚಿದಾಗ, ಅವರು ಸ್ವೇಚ್ಛಾಪ್ರವರ್ತಕರಾದರು, ಧರ್ಮಕ್ಕೆ ಗ್ಲಾನಿ ಬಂದಿತು. ಆಗ ಶಂಕರ, ರಾಮಾನುಜ, ಮಧ್ವರೆಂಬ ಹೆಸರಿನ ಆಚಾರ್ಯತ್ರಯರ ಉದಯವಾಯಿತು. ಭಗವಂತನ ಅಂಶವೇ ಈ ಎಲ್ಲ ಆಚಾರ್ಯರು.  ಇವರು ಭಕ್ತಿ, ಜ್ಞಾನ, ವೈರಾಗ್ಯಗಳಿಗೆ ಒತ್ತುಕೊಟ್ಟರು; ವೇದಮತವನ್ನು ಪುನಃ ಸ್ಥಾಪಿಸಿದರು; ಇದೇ ಅವರ ಹೆಗ್ಗಳಿಕೆ.

ವಿಷ್ಣುವನ್ನು ಪೂಜಿಸುವವರು ವೈಷ್ಣವರು. ಇವರು ವಿಷ್ಣುವಿನ ಅವತಾರಗಳಾದ ಶ್ರೀರಾಮ ಮತ್ತು ಶ್ರೀಕೃಷ್ಣನನ್ನೂ ಪೂಜಿಸುತ್ತಾರೆ. ‘ಶ್ರೀ’ ಎಂದರೆ ‘ಲಕ್ಷ್ಮೀ’ ಎಂದರ್ಥ. ತಾಯಿ ಲಕ್ಷ್ಮಿಯ ಪೂಜೆ ಮಾಡಿ, ಆಕೆಯ ಕೃಪೆಯ ಮುಖಾಂತರವೇ ವಿಷ್ಣುವನ್ನು ಒಲಿಸಿಕೊಳ್ಳಲು ಸಾಧ್ಯ ಎಂದು ವೈಷ್ಣವರ ಒಂದು ಪಂಗಡದವರು ನಂಬುತ್ತಾರೆ; ಅದರಂತೆ ಪ್ರಯತ್ನಿಸುತ್ತಾರೆ. ಅವರೇ ‘ಶ್ರೀವೈಷ್ಣವರು’ ಎನ್ನಿಸಿಕೊಳ್ಳುತ್ತಾರೆ. ಇವರು ವಿಶಿಷ್ಟಾದ್ವೈತ ತತ್ತ್ವವನ್ನು ಅನುಸರಿಸುತ್ತಾರೆ. ಬಹಳ ಹಿಂದಿನ ಕಾಲದಲ್ಲಿ ಶ್ರೀವೈಷ್ಣವ ಮತವನ್ನು ಜನರಲ್ಲಿ ಪ್ರಚಾರ ಮಾಡಿದವರು ತಮಿಳುನಾಡಿನ ವಿಷ್ಣುಭಕ್ತರಾದ ಆಳ್ವಾರರು. ಇವರು ಕ್ರಿ.ಶ. ೬ ರಿಂದ ೯ನೆಯ ಶತಮಾನದವರೆಗೆ ಜೀವಿಸಿದ್ದರು. ಇವರು ಒಟ್ಟು ೧೨ ಜನ.

ಆಳ್ವಾರರ ನಂತರ ಆಚಾರ್ಯರುಗಳ ಪರಂಪರೆ ಆರಂಭವಾಯಿತು. ‘ಆಚಾರ್ಯ’ ಎಂದರೆ ‘ಗುರು’ ಎಂದರ್ಥ. ಆಚಾರ್ಯರಲ್ಲಿ ಯಾಮುನಾಚಾರ್ಯರು ಮುಖ್ಯರು. ಇವರ ನಂತರದ ಆಚಾರ್ಯರೇ ರಾಮಾನುಜಾಚಾರ್ಯರು. ಅದುವರೆಗೆ ಹರಿದುಬಂದ ಭಕ್ತಿಪಂಥಕ್ಕೆ  ಉತ್ತಮ ಚೌಕಟ್ಟನ್ನು ಇವರು ನೀಡಿದರು; ಸಮರ್ಪಕ ಹಾಗೂ ಸಮಗ್ರವಾದ ವಿಶಿಷ್ಟಾದ್ವೈತ ದರ್ಶನವನ್ನು ಈ ಜಗತ್ತಿಗೆ ನೀಡಿದರು. ಎಲ್ಲ ಜನರೂ ಅನುಸರಿಸಬಹುದಾದ ಉದಾರ ತತ್ತ್ವಜ್ಞಾನವನ್ನು ಇವರು ಉಪದೇಶಿಸಿದರು.